

ಉದುರುತ್ತವೆ. ಈ ಜಿಂಕೆಗಳ ಕೊಂಬು ಪ್ರತಿ ವರ್ಷವೂ ಉದುರುತ್ತದೆ. ಮತ್ತೆ ಬೆಳೆಯುತ್ತದೆ.

ಹೆಣ್ಣಿಗೆ ಕೊಂಬುಗಳಿರುವುದಿಲ್ಲ. ಇವುಗಳ ಸಂತಾನಾಭಿವೃದ್ಧಿ ಕಾಲ ಮೇ ಮತ್ತು ಜೂನ್ ಅವಧಿಯಲ್ಲಿ. ಆ ಸಮಯದಲ್ಲಿ ಎರಡು ಗಂಡುಗಳ ನಡುವೆ ಸಂಗಾತಿಗಾಗಿ ಸಂಘರ್ಷ ಏರ್ಪಡುತ್ತದೆ. ಎರಡು ಗಂಡುಗಳು ತಮ್ಮ ಕೊಂಬುಗಳಿಂದ ಗುದ್ದುತ್ತಾ ಕಾದಾಡುತ್ತವೆ. ವಿಜಯಿಯಾದ ಜಿಂಕೆ ಹೆಣ್ಣು ಜಿಂಕೆಯನ್ನು ಸೇರುತ್ತದೆ.

ಒಂದು ಮರಿಗೆ ಜನ್ಮ ನೀಡುವ ಹೆಣ್ಣು ಜಿಂಕೆ ಅದನ್ನು ಜತನದಿಂದ ಕಾಪಾಡುವ ಪರಿ ಅನನ್ಯ. ಕಾಡಿನ ಮಾಂಸಾಹಾರಿಗಳಾದ ಹುಲಿ, ಚಿರತೆ, ಸಿಂಹ, ಕಾಡುನಾಯಿ ಮುಂತಾದವುಗಳಿಂದ ತನ್ನನ್ನೂ ತನ್ನ ಮರಿಯನ್ನೂ ರಕ್ಷಿಸಿಕೊಳ್ಳಲು ಹಗಲಿರುಳೂ ಹೋರಾಟ ಮಾಡಬೇಕಾದ ಅನಿವಾರ್ಯತೆ ಅದಕ್ಕಿದೆ. ವಿಚಿತ್ರವೆಂದರೆ ಇವುಗಳ ತಾಯಿ– ಮರಿಯ ಸಂಬಂಧ ಕೇವಲ ಒಂದು ವಾರವಷ್ಟೇ! ತಾಯಿ ಮರಿಯನ್ನು ಒಂದು ವಾರ ಕಾಲ ಜತನದಿಂದ ಕಾಪಾಡುತ್ತದೆ. ಆಮೇಲೆ ಅವು ಬೇರೆಯಾಗುತ್ತವೆ. ಗುಂಪಿನಲ್ಲೇ ಇರುತ್ತವೆ. ಆದರೂ ತನ್ನ ಮರಿಯನ್ನು ತಾಯಿ ಗುರುತಿಸುತ್ತದೆ. ಪ್ರತಿ ವರ್ಷ ಕೇವಲ ಒಂದು ಮರಿಗೆ ಜನ್ಮ ನೀಡುವ ಜಿಂಕೆ ತನ್ನ ಮರಿ ಸಾವಿಗೀಡಾದರೆ ಅದೇ ವರ್ಷ ಮತ್ತೊಂದು ಮರಿಗೆ ಜನ್ಮ ನೀಡುತ್ತದೆ. ಇವುಗಳ ಸರಾಸರಿ ಆಯಸ್ಸು ಸುಮಾರು 22 ವರ್ಷ. ಆದರೆ ಅಷ್ಟು ವರ್ಷ ಕಾಲ ಬದುಕುವುದು ಕಡಿಮೆ. ಅರಣ್ಯದ ಆಹಾರ ಸರಪಳಿಯಲ್ಲಿ ಬಹುತೇಕ ಜಿಂಕೆಗಳು ಮಾಂಸಾಹಾರಿ ಪ್ರಾಣಿಗಳಿಗೆ ಆಹಾರವಾಗಿ ತಮ್ಮ ಆಯುಷ್ಯವನ್ನು ಮೊಟಕುಗೊಳಿಸುತ್ತವೆ.

ಜಿಂಕೆಗಳ ಮೇಲ್ಮೈ ಹೊಂಬಣ್ಣವನ್ನು ಹೊಂದಿದ್ದು ಹೊಳೆವ ಬಿಳಿ ಚುಕ್ಕೆಗಳಿಂದ ಅಲಂಕೃತಗೊಂಡಿರುತ್ತವೆ. ಕಿವಿ, ಕಾಲು, ಹೊಟ್ಟೆಗಳು ಬಿಳಿ ಬಣ್ಣ ಹೊಂದಿರುತ್ತವೆ. ಹುಲ್ಲು, ಸೊಪ್ಪು ಇವುಗಳ ಮುಖ್ಯ ಆಹಾರ. ಆದರೆ ಹೊಸ ಚಿಗುರು ಹುಲ್ಲು ಇವುಗಳಿಗೆ ಅತ್ಯಂತ ಇಷ್ಟ.

ಜಿಂಕೆಗಳು ಇನ್ನೊಂದು ಪ್ರಾಣಿಯ ಆಹಾರಕ್ಕೆಂದೇ ಸೃಷ್ಟಿಯಾಗಿವೆಯೋ ಎನ್ನುವುದು ಇವುಗಳ ಜೀವನಚಕ್ರದಿಂದಲೇ ಅರಿವಾಗುವಂಥದು. ಕಾಡಿನಲ್ಲಿ ಹುಲಿ, ಚಿರತೆ, ಸಿಂಹ, ಕಾಡುನಾಯಿ, ಹಂದಿಗಳಿಗೆ ಮೊದಲ ಆಹಾರವಾಗುತ್ತವೆ. ಅವು ತಿಂದುಳಿಸಿದ ಮಾಂಸವನ್ನು ಮುಂಗುಸಿ, ನರಿ, ಕಾಗೆ, ರಣಹದ್ದು ಮುಂತಾದ ಜೀವಿಗಳು ಸವಿಯುತ್ತವೆ.

ಬಂಡೀಪುರದಲ್ಲಿ ದೊಡ್ಡ ಸಂಖ್ಯೆಯಲ್ಲಿ ಜಿಂಕೆಗಳಿವೆ. ಸಫಾರಿ ಹೋಗುವವರಿಗೆ ಬೇರೆ ಕಾಡುಪ್ರಾಣಿಗಳಂತೆ ಜಿಂಕೆಗಳೂ ಹೇರಳವಾಗಿ ಕಾಣಿಸುತ್ತವೆ. ಮಾಂಸಾಹಾರಿ ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ರಾತ್ರಿ ವೇಳೆ ಮನೆಯಂಗಳಕ್ಕೆ ಬಂದು ವಿಶ್ರಮಿಸುವ ದೃಶ್ಯ ಬಂಡೀಪುರದ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಾಮಾನ್ಯ.